ಓಎಸ್ ನಂಬರ್: 117/2015 ಡಿ ಡಬ್ಲ್ಯು: 2

**ದಿ:16.01.2023 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು: ವಾದಿ ಪರ ವಕೀಲರಿಂದ:**

1. ನಾನು ಮೂಲತಃ ಕಾರ್ಯಕ್ರಮದ ಹಿನ್ನೆಲೆ ಡಿಸೈನರ್ ಆಗಿ ಕೆಲಸ ಮಾಡುತ್ತಿದ್ದೆನು. ಸದರಿ ವೃತ್ತಿಯನ್ನು ನಾನು ಬೆಂಗಳೂರಿನಲ್ಲಿ ಮಾಡುತ್ತಿದ್ದೆನು ಎಂದರೆ ಸರಿ. ಈಗ ನಾನು ಕೃಷಿ ಮಾಡುತ್ತಿದ್ದೇನೆ. 3 ನೇ ಪ್ರತಿವಾದಿ ನನ್ನ ಸಹೋದರಿಯ ಗಂಡ ಎಂದರೆ ಸರಿ. ನಿಡಿ 10 ವಿಲ್ ನಾಮೆಗೆ ಸಾಕ್ಷಿದಾರರಾಗಿ ಸಹಿ ಮಾಡಿರುವಂತಹ ಮತ್ತೊಬ್ಬ ಸಾಕ್ಷಿದಾರರಾದಂತಹ ಸಿ.ಡಿ.ಈರಪ್ಪ ರವರು 3 ನೇ ಪ್ರತಿವಾದಿಯ ಸಹೋದರಿಯ ಗಂಡ ಎಂದರೆ ಸರಿ. ಅದೇ ರೀತಿ ಸದರಿ ಸಿ.ಡಿ. ಈರಪ್ಪರವರು ನನ್ನ ತಾಯಿಯ ಅಕ್ಕನ ಮಗ ಎಂದರೆ ಸರಿ.

2. 1 ನೇ ಪ್ರತಿವಾದಿಯವರು ನನ್ನ ತಂಗಿಯನ್ನು 3 ನೇ ಪ್ರತಿವಾದಿಯವರು ಮದುವೆಯಾದ ದಿನದಿಂದ ಪರಿಚಯ. ದಿ: 20.05.2017 ಅಥವಾ ದಿ: 21.05.2017 ರಂದು 1 ನೇ ಪ್ರತಿವಾದಿಯವರು ವಿಲ್ ನಾಮೆ ಮಾಡುವ ವಿಷಯವನ್ನು ನನಗೆ ದೂರವಾಣಿ ಮುಖಾಂತರ ತಿಳಿಸಿದ್ದರು. ಆ ಸವಯದಲ್ಲಿ 1 ನೇ ಪ್ರತಿವಾದಿಯವರು ವಿಲ್ ನಾಮೆಯನ್ನು ನೊಂದಾವಣೆ ಮಾಡಿಸುವ ಬಗ್ಗೆ ಕೂಡಾ ತಿಳಿಸಿದ್ದು ನನಗೆ ದಿ: 30.05.2017 ರಂದು ನೊಂದಾವಣೆ ಕಛೇರಿಗೆ ಬೆಳಿಗ್ಗೆ 10.00 ಗಂಟೆಗೆ ಬರಲು ತಿಳಿಸಿದ್ದರು. ಆ ಸಮಯದಲ್ಲಿ ನೊಂದಾವಣೆ ಕಛೇರಿ ಮೋಣಪ್ಪ ಗ್ಯಾರೇಜ್ ಬಳಿ ಇತ್ತು. ನಾನು ಸದರಿ ದಿನದಂದು ಕಡಿಯತ್ತೂರು ಗ್ರಾಮದ ಮನೆಯಿಂದ ನೊಂದಾವಣೆ ಕಛೇರಿಗೆ ಬೆಳಿಗ್ಗೆ 10.00 ಗಂಟೆಗೆ ಬಂದಿರುತ್ತೇನೆ. ನಾನು ನೊಂದಾವಣೆ ಕಛೇರಿಗೆ ಬಂದಾಗ 1 ನೇ ಪ್ರತಿವಾದಿ ಮತ್ತು ಸಿ. ಡಿ. ಈರಪ್ಪರವರು ಬಂದಿದ್ದರು.

3. 1 ನೇ ಪ್ರತಿವಾದಿ ಸದರಿ ದಿನದಂದು ಬಸ್ಸಿನಲ್ಲಿ ನೊಂದಾವಣೆ ಕಛೇರಿಗೆ ಬಂದಿರುತ್ತಾರೆ. ಆ ಸಮಯದಲ್ಲಿ 1 ನೇ ಪ್ರತಿವಾದಿ ತನ್ನ ಮಗನಾದ 3 ನೇ ಪ್ರತಿವಾದಿ ಮತ್ತು 3 ನೇ ಪ್ರತಿವಾದಿಯ ಹೆಂಡತಿಯಾದ ನಳಿನಿಯವರ ಜೊತೆ ವಾಸಿಸುತ್ತಿದ್ದರು. 3 ನೇ

ಪ್ರತಿವಾದಿ ಮತ್ತು ನನ್ನ ತಂಗಿಯಾದ ನಳಿನಿ ಆ ದಿನ ಬಂದಿರಲಿಲ್ಲ. ನಾನು ನೊಂದಾವಣಿ ಕಛೇರಿಗೆ ಹೋಗಿ 10.15 ಗಂಟೆಗೆ ವಕೀಲರು ಬಂದರು. ನಾನು ನೊಂದಾವಣಿ ಕಛೇರಿಗೆ ಹೋದ ಸಮಯದಲ್ಲಿ ನಿಡಿ 10 ವಕೀಲರ ಕೈಯಲ್ಲಿ ಇತ್ತು. ನಿಡಿ 10 ವಿಲ್ ನಾಮೆಗೆ ನಾನು ನೊಂದಾವಣಿ ಕಛೇರಿಯ ಒಳಗೆ ಸಾರ್ವಜನಿಕರಿಗೆ ಕುಳಿತುಕೊಳ್ಳಲು ವ್ಯವಸ್ಥೆ ಮಾಡಿರುವ ಜಾಗದಲ್ಲಿ ಸಹಿ ಮಾಡಿರುತ್ತೇನೆ. ವಕೀಲರು ನಿಡಿ 10 ವಿಲ್ ನಾಮೆಯನ್ನು ಸುಮಾರು 10-15 ನಿಮಿಷ ಓದಿ ಹೇಳಿದ ನಂತರದಲ್ಲಿ ಸಹಿ ಮಾಡಿರುತ್ತೇನೆ. ಮೊದಲಿಗೆ ನಿಡಿ 10 ವಿಲ್ ನಾಮೆಗೆ 1ನೇ ಪ್ರತಿವಾದಿ ಸಹಿ ಮಾಡಿರುತ್ತಾರೆ. ನಂತರದಲ್ಲಿ ಸಿ. ಡಿ. ಈರಪ್ಪ ರವರು ಸಹಿ ಮಾಡಿರುತ್ತಾರೆ. ಅನಂತರ ನಾನು ಸಹಿ ಮಾಡಿರುತ್ತೇನೆ. ನನ್ನ ಮತ್ತು ಸಿ. ಡಿ. ಈರಪ್ಪ ರವರ ವಿಳಾಸ ನಿಡಿ 10 ವಿಲ್ ನಾಮೆಯಲ್ಲಿ ಮೊದಲೇ ಬರೆದಿರಲಿಲ್ಲ. ನಾನು ಸಹಿ ಮಾಡಿದ ನಂತರದಲ್ಲಿ ವಿಳಾಸವನ್ನು ತಿಳಿಸಿದ ಮೇಲೆ ವಕೀಲರು ನಿಡಿ 10 ರಲ್ಲಿ ನಮ್ಮ ವಿಳಾಸವನ್ನು ಬರೆದಿರುತ್ತಾರೆ. ನಾನು ನೊಂದಾವಣಿ ಕಛೇರಿಯಲ್ಲಿ ವಿಲ್ ನಾಮೆ ನೊಂದಾವಣಿ ಆಗುವವರೆಗೂ ಇದ್ದೆನು. ಆಗ ಸುಮಾರು 10.45 ರಿಂದ 11.00 ಗಂಟೆಯವರೆಗೆ ಇದ್ದೆನು. ನಾನು ಮೊದಲನೇ ಬಾರಿ ನೊಂದಾವಣಿ ಅಧಿಕಾರಿಯವರ ಕೊಠಡಿಗೆ ಹೋಗಿರುವುದಿಲ್ಲ ಅದರೆ ಎರಡನೇ ಬಾರಿ ಸಹಿ ಮಾಡುವಾಗ ಹೋಗಿರುತ್ತೇನೆ. ನಿಡಿ 10 ವಿಲ್ ನಾಮೆಗೆ ನಾನು ನೊಂದಾವಣಿ ಅಧಿಕಾರಿಯವರ ಎದುರಿನಲ್ಲಿಯೇ ಸಹಿ ಮಾಡಿರುತ್ತೇನೆ. 1ನೇ ಪ್ರತಿವಾದಿಯವರು ನನ್ನ ಸಮ್ಮುಖದಲ್ಲಿ ನೊಂದಾವಣಿ ಅಧಿಕಾರಿಯವರ ಕೊಠಡಿಗೆ ಹೋಗಿರುವುದಿಲ್ಲ.

4. 1ನೇ ಪ್ರತಿವಾದಿಯವರಿಗೆ ಆ ಸಮಯದಲ್ಲಿ 85 ಅಥವಾ 95 ವರ್ಷ ವಯಸ್ಸಾಗಿತ್ತು. ಸಾಕ್ಷಿ ಪುನಃ ಮುಂದುವರೆದು 85 ವರ್ಷ ವಯಸ್ಸಾಗಿತ್ತು ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿಯವರಿಗೆ ಸಹಿ ಮಾಡುವಷ್ಟು ಶಕ್ತಿ ಇರಲಿಲ್ಲ ಎಂದರೆ ಸುಳ್ಳು. 1ನೇ ಪ್ರತಿವಾದಿಯವರ ಕಣ್ಣಿನ ದೃಷ್ಟಿ ಸರಿ ಇರಲಿಲ್ಲ ಮತ್ತು ಊರುಗೋಲಿನ ಸಹಾಯದಿಂದ ಓಡಾಡುತ್ತಿದ್ದರು ಎಂದರೆ ಸುಳ್ಳು. ವಿಲ್ ನಾಮೆಯ ಪ್ರಕಾರ ಯಾರಿಗೆಲ್ಲಾ ಆಸ್ತಿಯನ್ನು 1ನೇ ಪ್ರತಿವಾದಿಯವರು ಬರೆದಿರುತ್ತಾರೆ ಎಂದು ಹೇಳಲು ನನಗೆ ಗೊತ್ತಿಲ್ಲ. ವಕೀಲರು ನಿಡಿ 10 ವಿಲ್ ನಾಮೆಗೆ ಸಹಿ ಮಾಡಲು ನನಗೆ ಹೇಳಿದ್ದರಿಂದ ಮಾತ್ರ ನಾನು

ಸಹಿ ಮಾಡಿರುತ್ತೇನೆ ಎಂದರೆ ಸುಳ್ಳು. ಸಾಕ್ಷಿ ಮುಂದುವರೆದು 1ನೇ ಪ್ರತಿವಾದಿ ಸಹಿ ಮಾಡಲು ಹೇಳಿದ್ದರಿಂದ ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಹಾಗೆ 1ನೇ ಪ್ರತಿವಾದಿಯವರು ವಿಲ್ ನಾಮೆ ಮಾಡುವ ಬಗ್ಗೆ ತಿಳಿಸಿರುವುದಿಲ್ಲ ಮತ್ತು ಸಾಕ್ಷಿದಾರರಾಗಿ ಸದರಿ ವಿಲ್ ನಾಮೆಗೆ ಸಹಿ ಮಾಡಲು ಕೂಡಾ ಕೇಳಿಕೊಂಡಿರುವುದಿಲ್ಲ ಎಂದರೆ ಸುಳ್ಳು.

5. ನಿಡಿ 10 ವಿಲ್ ನಾಮೆಗೆ ಸಂಬಂಧಿಸಿದಂತೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸುಳ್ಳು. 3ನೇ ಪ್ರತಿವಾದಿ ನನ್ನ ತಂಗಿಯ ಗಂಡ ಆಗಿರುವುದರಿಂದ 3 ನೇ ಪ್ರತಿವಾದಿ ಮತ್ತು ನನ್ನ ತಂಗಿ ನನ್ನನ್ನು ಕೇಳಿಕೊಂಡಿರುವುದರಿಂದ ಅವರು ಸೃಷ್ಟಿಸಿರುವಂತಹ ನಿಡಿ 10 ವಿಲ್ ನಾಮೆಗೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸುಳ್ಳು. 1ನೇ ಪ್ರತಿವಾದಿಯವರು ಯಾವುದೇ ವಿಲ್ ನಾಮೆಯನ್ನು ಮಾಡಿರುವುದಿಲ್ಲ ಮತ್ತು 1ನೇ ಪ್ರತಿವಾದಿಯವರಿಗೆ ಯಾವ ದಾಖಲೆಗೆ ಸಹಿ ಮಾಡುತ್ತಿದ್ದೇನೆ ಎನ್ನುವ ಅರಿವು ಕೂಡಾ ಇರಲಿಲ್ಲ ಎಂದರೆ ಸುಳ್ಳು. ನಾನು ಹೇಳುವ ಹಾಗೆ ನನ್ನ ಮುಂದೆ 1ನೇ ಪ್ರತಿವಾದಿ ಮತ್ತು ಸಾಕ್ಷಿದಾರರಾದ ಸಿ.ಡಿ. ಈರಪ್ಪರವರು ನಿಡಿ 10 ವಿಲ್ ನಾಮೆಗೆ ಸಹಿ ಮಾಡಿರುವುದಿಲ್ಲ ಎಂದರೆ ಸುಳ್ಳು.

6. ನಿಡಿ 10 ವಿಲ್ ನಾಮೆಯಲ್ಲಿ ಇರುವ ನಿಡಿ 10(ಬಿ) ಸಹಿಯನ್ನು ನಾನು ನನ್ನ ತಂಗಿ ಮತ್ತು 3ನೇ ಪ್ರತಿವಾದಿಯವರ ಕೋರಿಕೆಯ ಮೇರೆಗೆ ನಂತರದಲ್ಲಿ ಹೋಗಿ ಸಹಿ ಮಾಡಿರುತ್ತೇನೆ ಎಂದರೆ ಸುಳ್ಳು. ನನ್ನ ತಂಗಿಯನ್ನು 3ನೇ ಪ್ರತಿವಾದಿಯವರಿಗೆ ಮದುವೆ ಮಾಡಿಕೊಟ್ಟ ಮೇಲೆ ನಾನು ಅಯ್ಯಂಗೇರಿಯಲ್ಲಿ ಇರುವ ಮನೆಗೆ ಆಗಾಗ ಹೋಗಿ ಬರುತ್ತಿದ್ದೆನು ಎಂದರೆ ಸರಿ . ನಾನು ಅಯ್ಯಂಗೇರಿಯಲ್ಲಿ ಇರುವ ಮನೆಗೆ ಆಗಾಗ ಹೋಗುವಾಗ ಸದರಿ ಮನೆಯಲ್ಲಿ 1ನೇ ಪ್ರತಿವಾದಿಯ ಜೊತೆ ವಾದಿಗಳು ಮತ್ತು ಅವರ ತಾಯಿ ಕೂಡಾ ವಾಸಿಸುತ್ತಿದ್ದರು ಎಂದರೆ ಸುಳ್ಳು. ನಾನು ನನ್ನ ತಂಗಿ ಮತ್ತು ನನ್ನ ಭಾವನಾದ 3ನೇ ಪ್ರತಿವಾದಿಯವರಿಗೆ ಸಹಾಯ ಮಾಡುವ ಸಲುವಾಗಿ ಮಾತ್ರ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಓಎಸ್ ನಂಬರ್: 117/2015 ಡಿ ಡಬ್ಲ್ಯು: 2

**<u>ಮರುವಿಚಾರಣೆ: ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-
(ಎನ್ ಬಿ ಜಯಲಕ್ಷ್ಮಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.

ಓಎಸ್ ನಂಬರ್: 117/2015 ಡಿ ಡಬ್ಲ್ಯು: 2

ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ಕೊಡಗು ಮಡಿಕೇರಿ.

ಓ ಎಸ್ ನಂಬರ್:

ಪಿಡಬ್ಲ್ಯು:7

| | | |
|---|---|---|
| ಸಾಕ್ಷಿದಾರರ ಹೆಸರು | : | |
| ತಂದೆ ಹೆಸರು | : | |
| ಪ್ರಾಯ | : | ವರ್ಷ |
| ಉದ್ಯೋಗ | : | |
| ವಾಸಸ್ಥಳ | : | |

**ದಿ:13.07.2022 ರಂದು** ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆ: ಶ್ರೀ ವಕೀಲರಿಂದ:**

**ಪಾಟೀ ಸವಾಲು: ಶ್ರೀ ವಕೀಲರಿಂದ:**

ವಕೀಲರ ಕೋರಿಕೆ ಮೇರೆಗೆ ಪಾಟೀ ಸವಾಲಿಗೆ ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ನೀಡಲಾಯಿತು.

**ಮರುವಿಚಾರಣೆ: ಇಲ್ಲ**

**ಓಎಸ್ ನಂಬರ್:** 117/2015 ಡಿ ಡಬ್ಲ್ಯೂಃ 2

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

(ಎನ್ ಬಿ ಜಯಲಕ್ಷ್ಮಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.

**ಎದುರುದಾರರು ಏಕಪಕ್ಷೀಯವಾಗಿರುವುದರಿಂದ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಗಿದೆ.**

ಲಿಖಿತ ತಕರಾರು / ಪ್ರತಿವಾದ ಪತ್ರ ಸಲ್ಲಿಸದ ಕಾರಣ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಗಿದೆ.